# ಎಲ್ಲ ದೈವೇಚ್ಛೆ

ಹೇಮಲತಾ ಮಾಧವರಾವ್

**ಭಕ್ತ ಕುಟುಂಬವೊಂದು ಭೀಕರ ವಿಪತ್ತಿನಿಂದ ಪಾರಾದ ಸ್ವಾರಸ್ಯಕರ ಕಥೆಯನ್ನು ಹೇಳಿರುವ ಶ್ರೀಮತಿ ಹೇಮಲತಾ ಅವರು ನುರಿತ ಪತ್ರಿಕೋದ್ಯಮಿಗಳು.**

ನಮ್ಮ ನೆರೆಯಲ್ಲಿ ಒಬ್ಬ ಸರ್ದಾರಜಿ ಇದ್ದಾರೆ—ತುಂಬ ಸಜ್ಜನರು, ಪರೋಪಕಾರ ಬುದ್ಧಿಯುಳ್ಳವರು. ಅವರ ಐದು ವರ್ಷದ ಬಾಲಕ ನಮ್ಮ ಮನೆಯವನಂತೆಯೇ ಇದ್ದಾನೆ. ನಮಗೂ ಆ ಕುಟುಂಬದವರಿಗೂ ಎಷ್ಟು ನಿಕಟ ಸಂಬಂಧವಿದೆಯೆಂದರೆ ಅವರ ಮನೆಗೆ ಬಂದವರು ನಮ್ಮ ಮನೆಗೂ ಬರುತ್ತಾರೆ, ನಮ್ಮ ಮನೆಗೆ ಬಂದವರು ಅವರ ಮನೆಗೂ ಹೋಗುತ್ತಾರೆ. ಆ ಬಾಲಕನ ಹುಟ್ಟು ಹಬ್ಬದ ಸಮಯದಲ್ಲಿ ಅವರ ಮನೆಯಲ್ಲಿ ಸಂಗೀತ ಇತ್ಯಾದಿ ಕಾರ್ಯಕ್ರಮಗಳು ಇರುತ್ತವೆ. ಕೊನೆಯಲ್ಲಿ ಸರ್ದಾರಜಿ ಕಥೆ ಹೇಳುತ್ತಾರೆ. ಸರ್ದಾರಜಿ ಕಥೆ ಹೇಳುವುದರಲ್ಲಿ ತುಂಬ ನಿಪುಣರು. ನಾವು ಅವರ ಕಥೆ ಕೇಳುತ್ತ ಮೈಮರೆಯುತ್ತೇವೆ, ಇನ್ನೊಂದು ಕಥೆ ಹೇಳಿ, ಇನ್ನೊಂದು ಕಥೆ ಹೇಳಿ ಎಂದು ಒತ್ತಾಯಿಸುತ್ತೇವೆ. ಒಮ್ಮೆ ಅವರು ತಮ್ಮ ಹಿಂದಿನ ಕಥೆಯನ್ನು ಹೇಳಿದರು :



'ಈ ಹುಡುಗನು ತಾಯಿಯ ತೊಡೆಯ ಮೇಲೆ ಮಲಗಿರುವಂತೆ ನನ್ನ ತಂದೆಯೂ ಮಲಗಿದ್ದನು. ಅವನು ನನ್ನ ಕೈಯಿಂದ ಸಾಯಬೇಕಿತ್ತು. ಇದು ನಡೆದದ್ದು ೧೯೪೭, ಭಾರತದ ವಿಭಜನೆಯ ಸಮಯದಲ್ಲಿ. ತುಂಬ ದಾರುಣವಾದ ಕಥೆ. ಭಗವಂತನ ದಯೆಯಿಂದ ಈ ಕಥೆ ಹೇಳಲು ನಾನು ಇನ್ನೂ ಬದುಕಿದ್ದೇನೆ.

'ಪ್ರಥಮ ಮಹಾಯುದ್ಧದಲ್ಲಿ ನಾನು ಸಿಖ್ ರೆಜಿಮೆಂಟಿನಲ್ಲಿದ್ದೆ. ನಿಂತಿರುಗಿ ಬಂದ ಸೈನಿಕರಿಗೆ ಸರ್ಕಾರವು ಬಿಯಾಸ್ ನದಿಯ ಸಮೀಪದಲ್ಲಿ ಉಚಿತವಾಗಿ ನಿವೇಶನಗಳನ್ನು ನೀಡಿತು. ಆ ಹಳ್ಳಿಯಲ್ಲಿ ನಾವು ಸಿಖ್‌ರು ಸುಮಾರು ೧೫೦ ಜನರಿದ್ದೆವು. ಸುಖವಾಗಿದ್ದೆವು. ಒಂದು ಗುರುದ್ವಾರವೂ ಇತ್ತು. ನಾವೆಲ್ಲರೂ ಕಷ್ಟಪಟ್ಟು ದುಡಿದು ಅನುಕೂಲವಂತರಾಗಿದ್ದೆವು. ನಮಗೆ ಸ್ವಾತಂತ್ರ್ಯದ ವಿಷಯ ಸಂತಸದ ವಿಷಯವಾಗಿತ್ತು. ಆದರೆ ದೇಶ ವಿಭಜನೆಯನ್ನು ಕುರಿತು ನಾವು ಚಿಂತಿಸಲೇ ಇಲ್ಲ. ನಮ್ಮ ಹಳ್ಳಿಯ ಪಕ್ಕದಲ್ಲಿ ಮುಸ್ಲಿಂ ಕುಟುಂಬಗಳಿದ್ದವು. ಅವರೂ ನೆಮ್ಮದಿಯಿಂದಿದ್ದರು.

'ಒಂದು ದಿನ ಇದ್ದಕ್ಕಿದ್ದಂತೆಯೇ ಅವರ ನಿಷ್ಠೆಯ ಕೆಲಸಗಾರನಾದ ಮುಸ್ಲಿಮನೊಬ್ಬನು ಒಂದು ಲಕೋಟೆಯನ್ನು ತಂದುಕೊಟ್ಟನು. ಅದರಲ್ಲಿ ಒಂದು ಗುಪ್ತ ಸಂದೇಶವಿತ್ತು : ಪಾಕಿಸ್ತಾನದಲ್ಲಿ ಹಿಂದೂ ಸಿಖ್‌ರಿಗೆ ಸ್ಥಾನವಿಲ್ಲ. ಅವರು ಫಕೀರರು. ಇಲ್ಲಿದ್ದರೆ ಅವರನ್ನು ಕೊಲ್ಲುತ್ತೇವೆ.

'ಅದನ್ನು ಓದಿ ನನ್ನ ಕೈ ನಡುಗತೊಡಗಿತು. ನಾನು ಬೇರೆ ಕುಟುಂಬಗಳಿಗೆ ಹೋಗಿ ಈ ವಿಷಯವನ್ನು ತಿಳಿಸಿದೆ. ಎಲ್ಲಿಗೆ, ಹೇಗೆ ಹೋಗುವುದು ನಮಗೆ ತಿಳಿಯದಾಗಿತ್ತು. ಈ ಜಾಗವನ್ನು ಖಾಲಿಮಾಡಿ ಭಾರತಕ್ಕೆ ಹೋಗುವುದೊಂದೇ ಮಾರ್ಗವಾಗಿತ್ತು. ಯಾವಾಗ ಬೇಕಾದರೂ ಮುಸ್ಲಿಮರು ಬಂದು ಧಾಳಿ ಮಾಡಬಹುದಿತ್ತು. ಹೆಚ್ಚು ಯೋಚಿಸುವುದಕ್ಕೆ, ಪ್ಲಾನ್ ಮಾಡುವುದಕ್ಕೆ ಸಮಯವಿರಲಿಲ್ಲ.

'ಕೂಡಲೇ ಟ್ರಕ್ ವ್ಯವಸ್ಥೆ ಮಾಡಿದೆವು. ಮಕ್ಕಳನ್ನು ಮತ್ತು ಮಹಿಳೆಯರನ್ನು ಟ್ರಕ್‌ನಲ್ಲಿ ಕೂರಿಸಿದೆವು, ಅವರ ರಕ್ಷಣೆಗಾಗಿ ನಾವು ನಾಲ್ಕು ಪುರುಷರು ಅದರಲ್ಲಿ ಕುಳಿತುಕೊಂಡೆವು.

'ಆಗ ನಡುರಾತ್ರಿ, ಗಾಢಾಂಧಕಾರ. ಟ್ರಕ್ ನಿಧಾನವಾಗಿ ಹೊರಟಿತು. ಅದು ನದಿಯ ದಂಡೆಯ ಮೇಲೆ ಹೋಗುತ್ತಿತ್ತು. ಯಾರ ಬಾಯಲ್ಲೂ ಮಾತೇ ಇಲ್ಲ, ಜೋರಾಗಿ ಉಸಿರು ಬಿಡುತ್ತಲೂ ಇರಲಿಲ್ಲ. ಗಾಢಾಂಧಕಾರದೊಡನೆ ನೀರವತೆಯೂ ಸೇರಿ ಪರಿಸ್ಥಿತಿ ಇನ್ನೂ ಗಂಭೀರವಾಯಿತು.

'ಟ್ರಕ್ ಇದ್ದಕ್ಕಿದ್ದಂತೆಯೇ ನಿಂತಿತು. ಅದರ ಚಕ್ರಗಳು ಮರಳಿನಲ್ಲಿ ಹೂತುಹೋಗಿದ್ದವು. ನಮ್ಮ ಭವಿಷ್ಯವೂ ಈ ಕಾಲಗರ್ಭದಲ್ಲಿ ಹೂತು ಹೋದಂತೆನಿಸಿತು. ಹೇಗಾದರು ಪ್ರಯತ್ನಪಟ್ಟು ವಾಹನ ವನ್ನು ಮುಂದಕ್ಕೆ ತಳ್ಳೋಣವೆಂದರೆ ಅದರ ಗ್ಯಾಸ್ ಖಾಲಿಯಾಗಿತ್ತು.

'ಸ್ವಲ್ಪ ದೂರದಲ್ಲಿ ಮಸೀದಿಯ ಮಿನಾರ್ ಕಾಣಿಸಿತು. ಅದು ಮುಸ್ಲಿಂ ಹಳ್ಳಿ. ನಾವು ಸಹಾಯಕ್ಕಾಗಿ ಅತ್ತಿತ್ತ ನೋಡುತ್ತಿದ್ದೆವು. ಒಬ್ಬ ಮುಸ್ಲಿಂ ನಮ್ಮನ್ನು ನೋಡಿ ಹಳ್ಳಿಯ ಕಡೆ ಓಡತೊಡಗಿದ. ಅದು ನಮಗೆ ಎಚ್ಚರಿಕೆ ನೀಡಿದಂತಾಯಿತು. ನಾವು ತುಂಬ ಆತಂಕ ಸ್ಥಿತಿಯಲ್ಲಿದ್ದೆವು. ಮಹಿಳೆಯರು ಮಕ್ಕಳು ಇದ್ದುದರಿಂದ ನಮಗೆ

ಇನ್ನೂ ಚಿಂತೆ ಜಾಸ್ತಿಯಾಯಿತು. ಏನೇನೋ ಹತ್ಯಾಕಾಂಡಗಳ ಬಗ್ಗೆ ಕೇಳಿದ್ದೆವು, ಏನೇನೊ ಗಾಳಿಸುದ್ದಿ ನಮ್ಮನ್ನು ತಲ್ಲಣಗೊಳಿಸಿತ್ತು. ಏನಾದರೂ ಆಗಲೆಂದು ಎಲ್ಲವನ್ನೂ ವಿಧಿಗೆ ಒಪ್ಪಿಸಿದೆವು.

'ನಮ್ಮ ಹತ್ತಿರ ಬಂದೂಕಗಳಿದ್ದವು. ಆದರೆ ಅವರನ್ನು ಎದುರಿಸುವುದು ಅಸಾಧ್ಯವಾಗಿತ್ತು. ಬುದ್ಧಿ ಶೂನ್ಯವಾದಂತಿತ್ತು—ಏನು ಮಾಡಬೇಕೊ ತೋಚಲಿಲ್ಲ. ಭಯದಿಂದಾಗಿ ಮಸೀದಿಯ ಹತ್ತಿರ ಜನ ಸೇರಿದ್ದಾರೆ, ಗಲಾಟೆ ನಡೆಯುತ್ತಿದೆ ಎಂದೆಲ್ಲ ಕಲ್ಪಿಸತೊಡಗಿದೆವು.

'ಮಹಿಳೆಯರು ಮತ್ತು ಮಕ್ಕಳನ್ನು ಟ್ರಕ್ಕಿನಿಂದ ಇಳಿದು ಅದರ ಕೆಳಗೆ ಬಚ್ಚಿಟ್ಟುಕೊಳ್ಳಲು ಹೇಳಿದೆವು. ಅವರು ಆ ದುರ್ಜನರ ದೌರ್ಜನ್ಯಕ್ಕೆ ಒಳಗಾಗಿ ಚಿತ್ರಹಿಂಸೆಯಿಂದ ಸಾಯುವುದಕ್ಕಿಂತ ನಮ್ಮಿಂದಲೇ ಹತರಾಗಿ ನಾವೂ ಪ್ರಾಣ ಕಳೆದುಕೊಳ್ಳುವುದು ಒಳ್ಳೆಯದೆಂದು ಭಾವಿಸಿದೆವು. ಸ್ತ್ರೀಯರು ನಮ್ಮೊಂದಿಗೆ ಸಹಕರಿಸಿದರು. ಅವರು ತಮ್ಮ ಕಣ್ಣಿಗೆ ಬಟ್ಟೆ ಕಟ್ಟಿಕೊಂಡರು, ಮಕ್ಕಳ ಕಣ್ಣಿಗೂ ಕಟ್ಟಿದರು.

ನಾವೆಲ್ಲ ಸೇರಿ ಸಣ್ಣ ಕೀರ್ತನೆ ಹಾಡಿದೆವು. ನನ್ನ ಮುಂದೆ ತಾಯಿ, ತಂದೆ, ಮಕ್ಕಳು, ನೆರೆಹೊರೆಯವರು ಇದ್ದರು. ನಾನು ನನ್ನ ಹೃದಯವನ್ನು ಕಲ್ಲಾಗಿಸಿದೆ. ಸೂಚನೆ ನೀಡಿದೆ : ಒಂದು, ಎರಡು, ಮೂರು ಹೇಳುತ್ತೇನೆ. ಮೂರರ ನಂತರ ಗುಂಡು ಹಾರಿಸುತ್ತೇನೆ. ನೀವೆಲ್ಲ ಸಾಯುತ್ತೀರಿ. ಅನಂತರ ನಾವು ಸಾಯುತ್ತೇವೆ. ಅಷ್ಟರಲ್ಲಿ ಗುಂಡುಗಳು ಮುಗಿಯುತ್ತವೆ.'

ಈ ಸನ್ನಿವೇಶದಲ್ಲಿ ಸರ್ದಾರಜೀ ಉಸಿರೆಳೆದುಕೊಂಡು ಸ್ವಲ್ಪ ನೀರು ಕುಡಿದರು. ಅನಂತರ ಮತ್ತೆ ಕಥೆ ಮುಂದುವರಿಸಿದರು:

'ನಾನು ಕರವಸ್ತ್ರ ಮೇಲೆತ್ತಿ ಪ್ರಾರ್ಥಿಸಿದೆ. ಒಂದು... ಎರಡು...ಮೂರು ಹೇಳುವುದಕ್ಕೆ ಮುಂಚೆ ಒಂದು ನಿಮಿಷ ನಿಲ್ಲಿಸಿ ಚಿಂತಿಸಿದೆ. ಕಣ್ಣು ಮುಚ್ಚಿಕೊಂಡಿದ್ದರೂ ಒಂದು ಪ್ರಕಾಶಮಾನವಾದ ಬೆಳಕು ಕಾಣಿಸಿತು. ಕಣ್ಣು ತೆರೆಯುವುದೇ ಕಷ್ಟವಾಯಿತು. ಮೂರನ್ನು ಹೇಳಲಾಗಲಿಲ್ಲ.

'ಟ್ರಕ್‌ನ ಹೆಡ್‌ಲೈಟ್ ಹತ್ತಿರ ಬರುತ್ತಿತ್ತು. ನಮಗೆ ಆಶ್ಚರ್ಯ. ಸ್ತ್ರೀಯರೂ ಬಟ್ಟೆ ತೆಗೆದು ನೋಡತೊಡಗಿದರು. ಆ ಟ್ರಕ್ ಮಿಲಿಟರಿಯದಾಗಿತ್ತು. ಅದರಲ್ಲಿ ಮುಸ್ಲಿಂ ಸೈನಿಕರಿದ್ದರು. ಆದರೆ ಮೇಜರ್ ಬ್ರಿಟಿಷ್‌ನವನಾಗಿದ್ದನು. ನಾವು ನಿಲ್ಲಿಸಲು ಹೇಳಿದೆವು. ಅವನು ಸಹಾನುಭೂತಿ ತೋರಿಸಿದನು. ನಮ್ಮ ವಾಹೆಗುರು ನಮ್ಮ ಪ್ರಾರ್ಥನೆ ಕೇಳಿದನು. ಮೇಜರ್ ನಮ್ಮನ್ನು ಟ್ರಕ್‌ನಲ್ಲಿ ಕೂರಿಸಿಕೊಂಡನು. ನಾವೆಲ್ಲ ಟ್ರಕ್ಕಿನೊಳಗೆ ತೂರಿಕೊಂಡೆವು. ಸಂತೋಷದಿಂದ ಪರಸ್ಪರ ತಬ್ಬಿಕೊಂಡು ಕುಳಿತೆವು. ಸುರಕ್ಷಿತ ಸ್ಥಳಕ್ಕೆ ಪ್ರಯಾಣ ಮುಂದುವರೆಯಿತು.'

ಸರ್ದಾರಜೀ ಕಥೆಯನ್ನು ಮುಗಿಸಿ ದೇವರಿಗೆ ಕೈ ಮುಗಿದರು.

**ಘಟನೆಗಳು ನಾವು ಭಾವಿಸಿದಂತೆ, ನಮ್ಮ ಯೋಜನೆಯಂತೆ ನಡೆಯುವುದಿಲ್ಲ. ಯಾವುದೋ ಅಜ್ಞಾತ ಹಸ್ತದ ಕೈವಾಡ ಜಗತ್ತಿನ ಎಲ್ಲ ಆಗುಹೋಗುಗಳ ಹಿಂದೆ ಇರುತ್ತದೆ. ಕೆಲವೊಮ್ಮೆ ನಮ್ಮ ಯೋಜನೆ ಅದಕ್ಕೆ ಹೊಂದಿಕೊಳ್ಳಬಹುದು ಅಷ್ಟೆ. ಆ ಅಜ್ಞಾತ ದಿವ್ಯ ಶಕ್ತಿಗೆ ತಲೆಬಾಗಿ, ಶರಣಾಗಿ ಬಾಳುವುದೇ ಈಶ್ವರಪ್ರಣಿಧಾನ.**

## ಹೆಜ್ಜೆಯ ಗುರುತು

ಒಂದು ರಾತ್ರಿ ಭಕ್ತನೊಬ್ಬನು ಸಮುದ್ರ ತೀರದಲ್ಲಿ ತಾನು ಭಗವಂತನೊಡನೆ ವಿಹರಿಸುತ್ತಿರುವಂತೆ ಕನಸು ಕಂಡನು. ಆಕಾಶದಲ್ಲಿ ಥಟ್ಟನೆ ತನ್ನ ಹಿಂದಿನ ಜೀವನದ ದೃಶ್ಯಗಳೆಲ್ಲಾ ಕಂಡವು. ಪ್ರತಿಯೊಂದು ದೃಶ್ಯದಲ್ಲೂ ಎರಡು ಜೊತೆ ಹೆಜ್ಜೆಯ ಗುರುತುಗಳು ಇದ್ದವು. ಒಂದು ತನ್ನದು ಮತ್ತೊಂದು ಭಗವಂತನದು. ಜೀವನದ ಕೆಲವು ದೃಶ್ಯಗಳಲ್ಲಿ ಒಂದೇ ಜೊತೆಯ ಹೆಜ್ಜೆಯ ಗುರುತುಗಳಿದ್ದವು. ಅತ್ಯಂತ ದುಃಖಕರ ಹಾಗೂ ಕಷ್ಟಕರ ಸನ್ನಿವೇಶಗಳಲ್ಲಿಯೇ ಆ ರೀತಿ ಇರುವುದನ್ನು ನೋಡಿ ಆಶ್ಚರ್ಯಚಕಿತನಾಗಿ ಕೇಳಿದ : 'ಓ ದೇವನೇ, ನೀನು ಸದಾ ನನ್ನೊಡನೆಯೇ ಇರುವೆನೆಂದು ವಾಗ್ದಾನ ಮಾಡಿದ್ದೆ. ಆದರೆ ನನ್ನ ಜೀವನದ ಅತ್ಯಂತ ಕಷ್ಟದ ಸನ್ನಿವೇಶಗಳಲ್ಲಿ ಒಂದೇ ಜೊತೆಯ ಹೆಜ್ಜೆಯ ಗುರುತು ಇದ್ದವು. ನನಗೆ ನಿನ್ನ ಆವಶ್ಯಕತೆಯ ತೀವ್ರತೆ ಇರುವಾಗಲೆಲ್ಲಾ ನೀನು ನನ್ನೊಡನೆ ಇರದೆ ಹೋದೆಯೇಕೆ ?'

ಅದಕ್ಕೆ ಭಗವಂತನು, 'ಹೇ ನನ್ನ ಅತ್ಯಂತ ಪ್ರೀತಿಪಾತ್ರನಾದ ಮಗುವೇ, ನಾನು ನಿನ್ನ ಕೈ ಎಂದಿಗೂ ಬಿಡೆನು. ನಿನ್ನ ಜೀವನದ ದುಃಖ ಹಾಗೂ ಕಷ್ಟಕರ ಸನ್ನಿವೇಶಗಳಲ್ಲಿ ನಾನು ನಿನ್ನನ್ನು ಎತ್ತಿಕೊಂಡು ನಡೆದುಬಿಟ್ಟೆನೆ. ಆದ್ದರಿಂದಲೇ ನೀನು ಕೇವಲ ಒಂದೇ ಜೊತೆಯ, ನನ್ನ ಹೆಜ್ಜೆಯ ಗುರುತನ್ನು ಕಾಣುತ್ತಿರುವೆ' ಎಂದನು.

## ನೀವು ದೇವರನ್ನು ಹುಡುಕುತ್ತಿರುವಿರಾ?

ಹುಡುಕಿ, ಆದರೆ ಕೇವಲ ನಿಮ್ಮೊಳಗೆ. ಆತನು ಯಾರಿಂದಲೂ ದೂರವಿಲ್ಲ. ಯಾರು ಸತ್ಯವಾಗಿ ಆತನನ್ನು ಕರೆಯುವರೋ ಅವರ ಬಳಿಯೇ ಇರುವನು. ನಿಮ್ಮ ಹೃದಯದಲ್ಲಿ ಒಂದು ಸ್ಥಳವನ್ನು ಕಂಡುಹಿಡಿದು ಅಲ್ಲಿ ಅವನೊಡನೆ ಮಾತನಾಡಿ. ಅದು ಅವನ ಬೈಠಕ್‌ಖಾನೆ. ಯಾರು ಯಾರು ದೇವರನ್ನು ಸಂಧಿಸಿರುವರೋ ಅವರೆಲ್ಲರೂ ಅವನನ್ನು ಅಲ್ಲಿಯೇ ಸಂಧಿಸಿರುವರು. ಭೇಟಿ ಮಾಡಲು ಆತನು ಬೇರಾವ ಸ್ಥಳವನ್ನೂ ಕಾದಿರಿಸಿಲ್ಲ.

(Art of Prayer ಪುಸ್ತಕದಿಂದ)